ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 597 (664) |
| ಸದಸ್ಯರ ಹೆಸರು | ಶ್ರೀ ಶಾಂತರಾಮ್ ಬುಡ್ನ ಸಿದ್ಧಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 13.12.2024 |

| ಕ್ರಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ. | ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಮೊಗಟಾ ಗ್ರಾಮ ಪಂಚಾಯತಿ ವ್ಯಾಪ್ತಿಯ ಬ್ರಹ್ಮೂರು ಗ್ರಾಮದ ಬೆಣದಳ್ಳಿಯ 40 ಕುಟುಂಬಗಳು ವಾಸಿಸುವ ಗ್ರಾಮಕ್ಕೆ 04 ಕಿ.ಮೀ ರಸ್ತೆ ಅಭಿವೃದ್ಧಿಗೆ ಕಳೆದ ಅನೇಕ ವರ್ಷಗಳಿಂದ ಬೇಡಿಕೆ ಇಟ್ಟರೂ ಸರ್ವಋತು ರಸ್ತೆ ಆಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ. | ಇಲ್ಲಿ ವಾಸಿಸುವ ಜನರಿಗೆ ಆಸ್ಪತ್ರೆ, ಶಾಲೆ ಹಾಗೂ ಅತಿ ಮುಖ್ಯ ರೇಷನ್ ಅಂಗಡಿಗೆ ಹೋಗಿ ಬರಲು ಕಾಲ್ನಡಿಗೆಯಲ್ಲಿಯೇ ಹೋಗಬೇಕಾಗಿದ್ದು, ಹಾಗೂ ಈ ಸಂದರ್ಭದಲ್ಲಿ ಅನಾರೋಗ್ಯದ ಮಕ್ಕಳನ್ನು ಕಂಬಳಿಯಲ್ಲಿ ಹೊತ್ತುಹೋಗುವ ಪರಿಸ್ಥಿತಿ ಇರುವುದು ಸರ್ಕಾರದ ಗಮನಕ್ಕೆ ಇದೆಯೇ; | ಗಮನದಲ್ಲಿದೆ. |
| ಇ. | ಅಂಕೋಲಾ ತಾಲ್ಲೂಕಿನ ಮೊಗಟಾ ಗ್ರಾಮ ಪಂಚಾಯತ್ ವ್ಯಾಪ್ತಿಯ ಸದರಿ ಬ್ರಹ್ಮೂರು ಗ್ರಾಮದ ಮಾಸ್ತಿಬೇಣ, ಸೊಪ್ಪರ್ಗತಿ, ದೊಡ್ಡಬೇಣ ಮೂಲಕ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಬೆಣದಳ್ಳಿವರೆಗಿನ 04 ಕಿ.ಮೀ ರಸ್ತೆಯನ್ನು ಆದಷ್ಟು ಶೀಘ್ರವಾಗಿ ನಿರ್ಮಾಣ ಮಾಡಲು ಸರ್ಕಾರ ಕೈಗೊಳ್ಳುವ ಕ್ರಮವೇನು? (ಸರ್ಕಾರದ ಮುಂದಿನ ಕ್ರಮಗಳ ಕುರಿತು ತಿಳಿಸಿ) | ಅಂಕೋಲಾ ತಾಲ್ಲೂಕಿನ ಬ್ರಹ್ಮೂರು ಗ್ರಾಮದ ಬೆಣದಳ್ಳಿ ಮಜಿರಿಯು ಮೊಗಟಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತಿದ್ದು, ಈ ಮಜಿರಿಗೆ ಬ್ರಹ್ಮೂರು ಮೂಲಕ ರಸ್ತೆ ಸಂಪರ್ಕವಿರುತ್ತದೆ. ಈ ರಸ್ತೆಯು ಬ್ರಹ್ಮೂರುನಿಂದ ಬೆಣದಳ್ಳಿ ಶಾಲೆಯ ವರೆಗೆ 5 ಕಿ.ಮೀ ಉದ್ದವಿದ್ದು ರಸ್ತೆಯು ಅರಣ್ಯ ಹಾಗೂ ಗುಡ್ಡಗಾಡು ಪ್ರದೇಶದಿಂದ ಹಾದುಹೋಗಿರುವುದರಿಂದ, ಸರ್ವರುತು ರಸ್ತೆ ನಿರ್ಮಾಣಕ್ಕೆ ಅರಣ್ಯ ಇಲಾಖೆಯಿಂದ ನಿರ್ಭಂಧವಿರುವುದರಿಂದ ರಸ್ತೆ ನಿರ್ಮಾಣ ಮಾಡಲು ಸಾದ್ಯವಾಗಿರುವುದಿಲ್ಲ. ಈ ರಸ್ತೆಯು ಚೈನೇಜ್ 0.00 ದಿಂದ 1.10 ಕಿ.ಮೀ ವರೆಗೆ ಕಾಂಕ್ರೀಟ್ ರಸ್ತೆ ಮಾಡಲಾಗಿರುತ್ತದೆ.<br><br>ಸದರಿ ರಸ್ತೆಯನ್ನು ಅತೀವೃಷ್ಠಿ ಹಾಗೂ ಇತರೆ ಯೋಜನೆಗಳಡಿ ಪ್ರತಿವರ್ಷ ದುರಸ್ಥಿ ಕೈಗೊಂಡು ಸಾರ್ವಜನಿಕರ ಮತ್ತು ವಾಹನ ಸಂಚಾರಕ್ಕೆ ಮಳೆಗಾಲ ಹೊರತುಪಡಿಸಿ ಇತರೆ ಅವಧಿಯಲ್ಲಿ ಅನುಕೂಲ ಮಾಡಲಾಗುತ್ತಿದೆ. |

| | | |
|---|---|---|
| | | ಬೆಣದಳ್ಳಿ ತಿರುವಿನಿಂದ ಶಾಲೆಯವರೆಗೆ ರಸ್ತೆ ನಿರ್ಮಾಣ ಮಾಡಲು (ಚೈನೇಜ್ 1.10 ದಿಂದ 5.00 ಕಿ.ಮೀ) ವರೆಗೆ ಅಂದಾಜು ರೂ.330.00 ಲಕ್ಷಗಳ ಅನುದಾನ ಅವಶ್ಯಕತೆ ಇದ್ದು, ಅರಣ್ಯ ಇಲಾಖೆಯ ಅನುಮತಿ ಹಾಗೂ ಅನುದಾನ ಲಭ್ಯತೆಯನ್ನಾಧರಿಸಿ ರಸ್ತೆ ನಿರ್ಮಾಣ ಮಾಡಲು ಕ್ರಮವಹಿಸಬೇಕಿದೆ. |

ಕಡತ ಸಂಖ್ಯೆ: ಗ್ರಾಅಪ/01/128/ಆರ್‌ಆರ್‌ಸಿ/2024

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು